ದಿನಾಂಕ : 16-8-1999ರ ಕರ್ನಾಟಕ ಮುದ್ರಾಂಕ ಕಾಯ್ದೆಯ ಕಲಂ-45-ಎ ರ ತಿದ್ದುಪಡಿತರುವ ಮುಂಚೆ ಕಾನೂನಿನಲ್ಲಿ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ನಿಬಂಧನೆ ಇರಲಿಲ್ಲ.

ದಿನಾಂಕ : 16-8-1999ರ ತಿದ್ದುಪಡಿಯಂತೆ ಮೂರು ತಿಂಗಳೊಳಗಾಗಿ ಜಿಲ್ಲಾ ನೋಂದಣಾಧಿಕಾರಿಯು ಅಪಮೌಲ್ಯ ಪ್ರಕರಣಗಳನ್ನು ಇತ್ಯರ್ಥಗೊಳಿಸಬೇಕಾಗಿರುತ್ತದೆ.

ಇದಲ್ಲದೆ ಹಳೆಯ ಪ್ರಕರಣಗಳು (ತಿದ್ದುಪಡಿಯ ಮುಂಚೆ ದಾಖಲಾದ) ಅಂತಹ ಪ್ರಕರಣಗಳಲ್ಲಿ ಕೊಡಬೇಕಾದ ಕೊರತೆ ಶುಲ್ಕಕ್ಕೆ ಶೇ. 30ರಷ್ಟು ರಿಯಾಯಿತಿಯನ್ನು ದಿನಾಂಕ : 20-4-1999 ರಿಂದ 20-7-1999 ರವರೆಗೆ ನಂತರ ಪುನಃ ಅದನ್ನು ದಿನಾಂಕ : 21-7-1999 ರಿಂದ 20-10-1999ರವರೆಗೆ ಏಕ ಕಾಲಿಕ ಇತ್ಯರ್ಥ ಯೋಜನೆಯನ್ನು ಸರ್ಕಾರವು ಜಾರಿಗೊಳಿಸಿದೆ.

ಬಾಕಿಉಳಿದಷ್ಟು ಪ್ರಕರಣಗಳು ಇನ್ನೂ ಬಾಕಿಯಿದ್ದು ಮೊದಲನೇ ಹಂತದಲ್ಲಿ ದಿನಾಂಕ : 1-4-2000 ದಿಂದ 30-6-2000ದ ವರೆಗೆ ಕೊರತೆ ಶುಲ್ಕದಲ್ಲಿ ಶೇ. 30 ರಷ್ಟು ರಿಯಾಯಿತಿ ಮತ್ತು 2ನೇ ಹಂತದಲ್ಲಿ ಅಂದರೆ ದಿನಾಂಕ : 1-7-2000 ರಿಂದ 30-9-2000ದ ವರೆಗೆ ಅವಧಿಯಲ್ಲಿ ಶೇ 20 ರಷ್ಟು ರಿಯಾಯಿತಿ ಕೊಡುವ ಯೋಜನೆ ಜಾರಿಗೊಳಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುತ್ತಿದೆ.

ಕೃಷಿ ಪಾಸ್ ಪುಸ್ತಕ

1155 (1401) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಕೃಷಿನ ಪಾಸ್ ಪುಸ್ತಕ ಅಧಿನಿಯಮ 1984ಕ್ಕೆ ತಿದ್ದುಪಡಿ ತರಲಾಗಿದೆಯೇ ; ಹಾಗಿದ್ದಲ್ಲಿ ತಿದ್ದುಪಡಿ ವಿವರಗಳನ್ನು ನೀಡುವುದು;

2) ಕೃಷಿ ಸಾಲ ಪಾಸ್ ಪುಸ್ತಕ ಇಡೀ ರಾಜ್ಯದಲ್ಲಿ ರೈತರಿಗೆ ನೀಡಲು ಸರ್ಕಾರ ಏನಾದರೂ ಕಾರ್ಯ ಯೋಜನೆಗಳನ್ನು ರೂಪಿಸಿದೆಯೇ ಹಾಗೂ ಇದುವರೆವಿಗೂ ಎಷ್ಟು ರೈತರಿಗೆ ಈ ಪಾಸ್ ಪುಸ್ತಕವನ್ನು ವಿತರಿಸಲಾಗಿದೆಯೇ, ಜಿಲ್ಲಾವಾರು ಪೂರ್ಣ ವಿವರ ಗಳನ್ನು ನೀಡುವುದು?

ಶ್ರೀ ಹೆಚ್.ಸಿ ಶ್ರೀ ಕಂಠಯ್ಯ (ಕಂದಾಯ ಸಚಿವರು) :

1) ಹೌದು ಈಗಿರುವ ಕೃಷಿ ಪಾಸ್ ಪುಸ್ತಕಕ್ಕೆ ಕೆಲವು ಹೆಚ್ಚಿನ ಉಪಯುಕ್ತವಾದ ಮಾಹಿತಿಗಳನ್ನು ಸೇರಿಸಿ ಕೃಷಿ ಸಾಲ ಪಾಸ್ ಪುಸ್ತಕ (ತಿದ್ದುಪಡಿ) ನಿಯಮಗಳು 1998ನ್ನು ಪ್ರಕಟಿಸಲಾಗಿದೆ. ಇದರಲ್ಲಿ ಹೊಸದಾಗಿ ಆಸ್ತಿಯ ಮೇಲಿರುವ ಋಣಭಾರ, ಪಹಣಿ ಪತ್ರಿಕೆ, ನಮೂನೆ 16 ರ ಪ್ರತಿ, ಹಿಡುವಳಿ ಜಮೀನಿನ ನಕ್ಷೆ ಪ್ರತಿ ಖಾತೆದಾರನ ವಾರ್ಷಿಕ ಆದಾಯ, ಖಾತೆದಾರನ ಜಾತಿ; ಉಪಜಾತಿ ಹಾಗೂ ಅವರ ಕುಟುಂಬದ ಸದಸ್ಯರ ಬಗ್ಗೆ ಸಂಕ್ಷಿಪ್ತ ವಿವರಗಳು ಒಳಗೊಂಡಿವೆ.

2) ಹೌದು ಈ ಹೊಸ ಕೃಷಿ ಪಾಸ್ ಪುಸ್ತಕ ಮುದ್ರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಹುಬ್ಬಳ್ಳಿ ತಾಲ್ಲೂಕಿಗೆ ಹೆಚ್ಚುವರಿ ತಹಶೀಲ್ದಾರ್ ಮತ್ತು ಸದರಿ ಜಿಸ್ಕಾರ್ ನೇಮಕ

1156 (1402) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?